**2** ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ**.** ರವರ ನ್ಯಾಯಾಲಯ**,** ಅರಕಲಗೂಡು**.**

ಸಿ**.**ಸಿ**.** ನಂ**.-958/2017**

ದಿನಾಂಕಃ **14.02.2025**

ಪಿರ್ಯಾದುದಾರರು **:** ಶ್ರೀ**.**ಸಿ**.**ಟಿ**.**ಪ್ರದೀಪ

ವಿರುದ್ಧ

ಆರೋಪಿ **:** ಶ್ರೀ. ಹೂವಣ್ಣ

<u>ಆಪಾದನೆ</u>

ಶ್ರೀ**.**ರಘು**.**ಎಂ**.,** ಬಿ**.**ಎ**.**ಎಲ್**.,** ಎಲ್ಎಲ್ಬಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಅರಕಲಗೂಡು ಆದ ನಾನು**,** ಆರೋಪಿಯಾದಃ**-**

ಶ್ರೀ. ಹೂವಣ್ಣ ಬಿನ್ ನಂಜೇಗೌಡ,<br>
ಸುಮಾರು 47 ವರ್ಷ**,**<br>
ವಾಸಃ ಕೋಟೆ ಹಿಂದಲ ಕೊಪ್ಪಲು ಗ್ರಾಮ**,**<br>
ಕಸಬಾ ಹೋಬಳಿ**,**<br>
ಅರಕಲಗೂಡು ತಾಲ್ಲೂಕು**,**<br>
ಹಾಸನ ಜಿಲ್ಲೆ**.**

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ,

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿದ್ದು, ಪರಿಚಯದ ಆಧಾರದ ಮೇಲೆ ನೀವು ಫಿರ್ಯಾದುದಾರರಿಂದ ದಿನಾಂಕಃ 30.05.2016 ರಂದು ರೂ.2,75,000/- ಗಳನ್ನು ಒಂದು ನಿವೇಶನವನ್ನು ಖರೀದಿಸುವ ಉದ್ದೇಶದಿಂದ ಸಾಲವಾಗಿ ಪಡೆದುಕೊಂಡಿದ್ದು, ಒಂದು ವರ್ಷದಲ್ಲಿ ಮರುಪಾವತಿಸಲು ಒಪ್ಪಿರುತ್ತೀರಿ.

ಸದರಿ ಸಾಲದ ಹಣಕ್ಕೆ, ನೀವು ನಿಮ್ಮ ಖಾತೆ ಇರುವ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಹಾಸನ ಶಾಖೆಗೆ ಸೇರಿದ ಚೆಕ್ ಸಂಖ್ಯೆ 073031 ನ್ನು ದಿನಾಂಕಃ01.06.2017 ಎಂದು ನಮೂದು ಮಾಡಿ ನಗಧೀಕರಿಸಿಕೊಳ್ಳುವಂತೆ ಫಿರ್ಯಾದುದಾರರಿಗೆ ನೀಡಿರುತ್ತೀರಿ.

ಅದರಂತೆ ಪಿರ್ಯಾದುದಾರರು ದಿನಾಂಕಃ 01.06.2017 ರಂದು ಸದರಿ ಚೆಕ್ಕಿನ ಮೊತ್ತವನ್ನು ನಗಧೀಕರಿಸುವ ಸಲುವಾಗಿ ತಮ್ಮ ಖಾತೆ ಇರುವ ಕೆನರಾ ಬ್ಯಾಂಕ್, ಅರಕಲಗೂಡು ಶಾಖೆಯ ಮೂಲಕ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್ ಹಾಸನ ಶಾಖೆಗೆ ಹಾಜರುಪಡಿಸಿದ್ದು, ನಿಮ್ಮ ಖಾತೆಯಲ್ಲಿ " ಸಾಕಷ್ಟು ಹಣವಿಲ್ಲ

"(Funds Insufficient)" ಎಂಬ ಹಿಂಬರಹದೊಂದಿಗೆ ತಿರಸ್ಕೃತಗೊಂಡ ಚೆಕ್ಕನ್ನು ದಿಃ 15.06.2017 ರಂದು ಪಿರ್ಯಾದುದಾರರಿಗೆ ನೀಡಿರುತ್ತಾರೆ.

ನಂತರ ಸದರಿ ಸಾಲದ ಮೊತ್ತವನ್ನು ಮರುಪಾವತಿ ಮಾಡುವಂತೆ ದಿನಾಂಕಃ 29.06.2017 ರಂದು ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮೂಲಕ ನಿಮಗೆ ಕಳುಹಿಸಿದ್ದು, ಸದರಿ ನೋಟೀಸ್ ನ್ನು ನೀವು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುತ್ತೀರಿ. ನೀವು ಪಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ ಹಾಗೂ ಮರುತ್ತರವನ್ನು ನೀಡಿರುವುದಿಲ್ಲ. ಹಾಗಾಗಿ ನಿಮ್ಮ ಮೇಲೆ ವರ್ಗಾವರ್ಣಿಯ ಲಿಖಿತಗಳ ಅಧಿನಿಯಮ ಕಲಂ 138 ಮತ್ತು 142 ರನ್ವಯ ಆಪಾದನೆ ಇದೆ.

<u>ಆರೋಪಿ ಹೇಳಿಕೆ</u>

ಪ್ರಶ್ನೆ 1. ನಿಮಗೆ ಈಗ ಓದಿ ಹೇಳಿದ ಆರೋಪಣೆ ತಿಳಿಯಿತೇ ?

ಉತ್ತರ :

ಪ್ರಶ್ನೆ 2. ಸದರಿ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿ ಕೊಳ್ಳುತ್ತೀರಾ ?

ಉತ್ತರ :

2ನೇ ಹೆಚ್ಚುವರಿ ಸಿವಿಲ್ ಜಡ್ಜ್<br>ಮತ್ತು ಜೆ.ಎಂ.ಎಫ್.ಸಿ, ಅರಕಲಗೂಡು.